ಅವರು ಬಂದಾಗ ಗೊತ್ತಾದದ್ದು ಇನ್ನೊಂದು ಅಚ್ಚರಿಯ ವಿಷಯ. 'ವಿಸಾರಣೈ' ತಮಿಳು ಸಿನಿಮಾ ಆಸ್ಕರ್‌ಗೆ ಆಯ್ಕೆಯಾಗಿದ್ದು, ಅದನ್ನು ಪ್ರೊಮೋಟ್ ಮಾಡಲೆಂದು ವೆಟ್ರಿಮಾರನ್ ಜತೆಗೆ ಜೇಕಬ್ ಹೋಗಿದ್ದರು. ವೆಟ್ರಿಮಾರನ್ ಅವರಿಗೆ ಜೇಕಬ್ ಪರಮಾಪ್ತ ಎಂದು ಗೊತ್ತಾದದ್ದೇ ಆಗ. ಸತ್ಯ ಕಣ್ಣು ಅರಳಿತು.

'ಚಂಬಲ್' ಕೆಲಸ ಮುಗಿದ ಮೇಲೆ ವೆಟ್ರಿಮಾರನ್ ಅವರನ್ನು ಭೇಟಿ ಮಾಡಿಸುವಂತೆ, ತಮಿಳಿನಲ್ಲಿ ಅವಕಾಶ ಕೊಡಿಸುವಂತೆ ಜೇಕಬ್‌ಗೆ ದುಂಬಾಲು ಬಿದ್ದರು. ಸಿಕ್ಕಾಗಲೆಲ್ಲ ಅದೇ ಬೇಡಿಕೆ.

'ನಾನು ಅಭಿನಯದ ನಡುವೆ ಬಿಡುವು ಸಿಕ್ಕರೆ ಏನಾದರೂ ಬರೆಯುತ್ತಾ ಕೂರುತ್ತಿದ್ದೆ. ಅದನ್ನೆಲ್ಲ ನೋಡಿ ಜೇಕಬ್ ಸರ್ ನೀನು ಎಲ್ಲಿಗೋ ಹೋಗ್ತೀಯ ಮುಂದೆ ಎನ್ನುತ್ತಿದ್ದರು. ನಾನು ವೆಟ್ರಿಮಾರನ್ ಜತೆ ಕೆಲಸ ಮಾಡುವ ಕನಸಿಗೆ ಆಗ ರೆಕ್ಕೆ ಪುಕ್ಕ ಮೂಡಿಸಿಕೊಳ್ಳುತ್ತಿದ್ದೆ' ಎಂದು ಸತ್ಯ ಸಿನಿಮೀಯ ಶೈಲಿಯಲ್ಲೇ ನೆನಪಿಸಿಕೊಂಡರು.

ಹತ್ತು ವರ್ಷಗಳ ಹಿಂದೆ ಸಮಾರಂಭವೊಂದರಲ್ಲಿ ಕೊಟ್ಟಿದ್ದ ಉಡುಗೊರೆಗಳು ಬದಲಾಗಿದ್ದವು. ಜೇಕಬ್‌ಗೆ ಕೊಟ್ಟಿದ್ದ ಜೀಸಸ್ ಮೂರ್ತಿ ಸತ್ಯ ಅವರಿಗೆ ಸಿಕ್ಕಿತ್ತು. ಇವರ ಬೆಳ್ಳಿ ಗಣಪನ ಮೂರ್ತಿ ಜೇಕಬ್ ಕೈ ಸೇರಿತ್ತು. ಬದಲಾದ ದೇವರುಗಳು ಇಬ್ಬರನ್ನೂ ಹತ್ತಿರ ತಂದಿದ್ದರು! ಅಲ್ಲಿಂದಾಚೆಗೆ ಸತ್ಯ ಹಾಗೂ ಜೇಕಬ್ ಒಟ್ಟಿಗೆ ಕೆಲಸ ಮಾಡಿದರು. ಮುಂದೆ ವೆಟ್ರಿಮಾರನ್ ಅವರನ್ನು ಪರಿಚಯಿಸಿದ್ದು ಇದೇ ಜೇಕಬ್.

'ವೆಟ್ರಿಮಾರನ್ ಫೋಟೊಗಳನ್ನು ಕೇಳಿದರು. ದೇಹದಾರ್ಢ್ಯ ತೋರುವ ಫೋಟೊಗಳನ್ನೂ ಪಡೆದರು. ಸಾಯಿಪಲ್ಲವಿ ಅವರೊಟ್ಟಿಗೆ ಬೆಂಗಳೂರಿಗೆ ಶೂಟ್ ಮಾಡಲು ಬಂದಾಗಲೊಮ್ಮೆ ಅವರನ್ನು ನೋಡಿ ಪುಲಕಗೊಂಡಿದ್ದೆ. ನನ್ನ ಸಿನಿಮಾಗಳನ್ನೂ ಅವರು ನೋಡಿದ್ದರು. ಅಂತಹ ಮೆಚ್ಚಿನ ನಿರ್ದೇಶಕ ಕೊನೆಗೂ ನನಗೆ ಅವಕಾಶ ಕೊಟ್ಟರು. ಎರಡು ಮೂರು ದಿನ ಶೂಟಿಂಗ್ ಇರಬಹುದು ಎಂದುಕೊಂಡಿದ್ದೆ. ಇಷ್ಟವಾಗದಿದ್ದರೆ ಯಾರನ್ನು ಬೇಕಾದರೂ ಸೆಟ್‌ನಿಂದ ಓಡಿಸುವ, ಶೂಟ್ ಮಾಡಿದ್ದರೂ ಬೇಡವೆನಿಸಿದರೆ ಕಟ್ ಮಾಡಿ ಬಿಸಾಕುವ ಅವರ ಜಾಯಮಾನದ ಬಗೆಗೆ ಕೇಳಿದ್ದೆ. ಕೊನೆಗೆ ಅಲ್ಲಿಗೆ ಹೋದಮೇಲೆ ಗೊತ್ತಾಯಿತು, ನನಗೆ ಕೊಟ್ಟಿರುವುದು ಮುಖ್ಯ ಪಾತ್ರ ಅಂತ. ಹೋಂವರ್ಕ್ ಮಾಡಿಯೇ ಹೋಗುತ್ತಿದ್ದೆ. ನಾನು ಅವರಿಗೆ ಕೊಟ್ಟಿದ್ದು ಓಪನ್ ಕಾಲ್‌ಶೀಟ್. 'ವಿಡುದಲೈ'ಗಾಗಿ ಎರಡು ವರ್ಷ ಅರ್ಪಿಸಿಕೊಂಡೆ. ಈ ಅವಧಿಯಲ್ಲಿ ವೆಟ್ರಿಮಾರನ್ ಅವರನ್ನು ಸಾಕ್ಷಾತ್ ಗುರುವಿನಂತೆ ಭಾವಿಸಿದೆ...' ಭಾವುಕರಾದರು ಸತ್ಯ.

ವೆಟ್ರಿಮಾರನ್ ಬರೆದಿಟ್ಟುಕೊಂಡ ಸ್ಕ್ರಿಪ್ಟನ್ನೇ ಪೂರ್ತಿ ನೆಚ್ಚಿಕೊಳ್ಳುವುದಿಲ್ಲ. ಸ್ಥಳದಲ್ಲೇ ಸಾಕಷ್ಟು ಮಾರ್ಪಾಟು ಮಾಡುವುದು ಜಾಯಮಾನ. ಪಾತ್ರವು ಸಂಭಾಷಣೆ ಹೇಳುವಾಗ ಧ್ವನಿಯ ಏರಿಳಿತ ಹೇಗಿರಬೇಕು, ಎಲ್ಲಿ ಎಷ್ಟು ಭಾವ ತುಂಬಬೇಕು, ಮೌನ ಎಲ್ಲೆಲ್ಲಿ ಇರಬೇಕು... ಎಲ್ಲವೂ ಸಹಜವಾಗಿ ಬರಬೇಕು ಎನ್ನುವ ಹಟ. ಇವೆಲ್ಲವನ್ನೂ ಕಂಡುಂಡ ಸತ್ಯ ಖುದ್ದು ತಿಂಗಳುಗಟ್ಟಲೆ ತಮ್ಮನ್ನು ತಾವೇ ತಿದ್ದಿಕೊಳ್ಳಲು ಸಾಧ್ಯವಾಗಿದೆ.

'ನಾನೀಗ ಯಾವ ನಿರ್ದೇಶಕನ ಇಶಾರೆಯಿಂದಲೂ ನಟಿಸಬಲ್ಲೆ. ವಿಡುದಲೈನಲ್ಲಿ ನನ್ನ ಅಭಿನಯ ಕೌಶಲ ಏನಾದರೂ ಕಂಡರೆ ಅದರ ಶೇಕಡಾ ಎಪ್ಪತ್ತರಷ್ಟು ಪಾಲು ವೆಟ್ರಿಮಾರನ್ ಅವರದ್ದೆ. ಅವರೀಗ ನನ್ನ ಗುರು' ಎಂದು ಸತ್ಯ ಅನುಭವ ಹಂಚಿಕೊಂಡರು.

ಮನೆ ಬಿಟ್ಟು, ಕಚೇರಿಯಲ್ಲೇ ಮಲಗುವ ವೆಟ್ರಿಮಾರನ್ ಸದಾ ಸಿನಿಮಾ ಉಸಿರಾಡುತ್ತಾರೆ. ದೇಶದ ಉದ್ದಗಲಕ್ಕೂ ಅವರ ತಳಿಯ ನಿರ್ದೇಶಕರು–ನಟರು ಇರಬೇಕು ಎಂದು ಬಯಸುತ್ತಾರೆ. ಕನ್ನಡದ 'ಪೆದ್ರೊ' ನೋಡಿ ಅದನ್ನು ಅರ್ಪಿಸಿದ್ದರು. ರಿಷಭ್ ಶೆಟ್ಟಿ ತರಹದ ನಿರ್ದೇಶಕರ ಜತೆ ಅವರಿಗೆ ಸದಾ ಒಡನಾಟವಿದೆ. ಜಾತಿ, ಧರ್ಮ ಇಲ್ಲದ ಅವರು ಬೇರೆ ಭಾಷೆಯ ನಟ–ನಟಿಯರ ವಿಷಯದಲ್ಲೂ ಭೇದಭಾವ ತೋರಿಲ್ಲ.

ಇವೆಲ್ಲವನ್ನೂ ತಮ್ಮ ಅನುಭವದಿಂದಲೇ ಹೇಳುವ ಸತ್ಯ, 'ಇವನು ನೋಡೋಕೆ ದಡ್ಡ, ಮಳ್ಳನಂತೆ ಕಾಣುತ್ತಾನೆ. ಆದರೆ, ಕನ್ನಡದ ಅರ್ಧ ಸೂಪರ್‌ಸ್ಟಾರ್ ಇವನು' ಎಂದು ಒಂದೊಮ್ಮೆ ವೆಟ್ರಿಮಾರನ್ ಹೊಗಳಿದ್ದನ್ನು ನೆನಪಿಸಿಕೊಂಡು ಧನ್ಯತಾಭಾವ ವ್ಯಕ್ತಪಡಿಸುತ್ತಾರೆ.

ವಿಜಯ್ ಸೇತುಪತಿ ಎಲ್ಲ ನಟ–ನಟಿಯರನ್ನೂ ಗಮನಿಸುವ ಪರಿಯನ್ನು ಕಂಡಿರುವ ಕನ್ನಡದ ಈ ನಟನನ್ನು ಈಗ ಐದಾರು ಸಿನಿಮಾ ಅವಕಾಶಗಳು ಹುಡುಕಿಕೊಂಡು ಬಂದಿವೆ. 'ವಿಡುದಲೈ' ನಡುವೆಯೇ ಕನ್ನಡದ 'ಸೈಕಿಕ್' ಎಂಬ ಸಿನಿಮಾದಲ್ಲೂ ನಟಿಸಿ ಆಗಿದೆ.

'ಶೂಟಿಂಗ್ ಇದ್ದರೂ, ಇರದೇ ಇದ್ದರೂ ನೀನು ಇಲ್ಲಿ ಇರಬೇಕು ಅಂತ ವೆಟ್ರಿಮಾರನ್ ಬಯಸ್ತಾರೆ' ಎಂದು ಸಹಾಯಕ ನಿರ್ದೇಶಕ ಮಣಿಮಾರನ್ ಹೇಳಿದ ಮಾತು ಸತ್ಯ ಕಿವಿಯಲ್ಲಿನ್ನೂ ಅನುರಣಿಸುತ್ತಿದೆ. ಮಣಿಮಾರನ್ ಹಾಗೂ ವೆಟ್ರಿ ಇಬ್ಬರನ್ನೂ ಒಂದೇ ನಾಣ್ಯದ ಎರಡು ಮುಖಗಳು ಎಂದು ಅವರು ಬಣ್ಣಿಸುತ್ತಾರೆ.

'ದೇಶದ, ವಿಶ್ವದ ಒಳ್ಳೆಯ ನಟ ಹಾಗೂ ಉತ್ತಮ ನಿರ್ಮಾಪಕ ಆಗುವುದು ನನ್ನ ದೊಡ್ಡ ಕನಸು' ಎನ್ನುವ ಅವರ ಮಹತ್ವಾಕಾಂಕ್ಷೆಗೆ ವೆಟ್ರಿಮಾರನ್ ರೆಕ್ಕೆ ಕಟ್ಟಿರುವುದಂತೂ ನಿಜ.

ಪ್ರತಿಕ್ರಿಯಿಸಿ: feedback@sudha.co.in



'ವಿಡುದಲೈ 1' ಚಿತ್ರದಲ್ಲಿ ವೆಟ್ರಿಮಾರನ್ ನಿರ್ದೇಶನದ ಗಳಿಗೆ